ಘಮಘಮಿಸಿ ಮುದಕೊಡುವ ಅರಳುಮಲ್ಲಿಗೆ ದಂಡೆಯಲ್ಲಿ ಆಗಾಗ ಇಣುಕಿಕ್ಕುವ ನಾರಿನಂತೆ ಅದೊಂದು ನೆನಪು. ನಾರು ಶಬ್ದಕ್ಕಿರುವ ಶ್ಲೇಷಾರ್ಥ ಹೊಳೆದು ತನ್ನ ಜೀವನದಲ್ಲಿ ಈ ಕ್ಷಣದ ಅದರ ಪ್ರಸ್ತುತತೆಗೆ ಮನಸು ನರಳಿತು. ಒಳಗಿಂದಲೆ ಗಮನವಿಟ್ಟಿದ್ದ ಅಂಬಾಬಾಯಿ ಮತ್ತೆರಡು ಇಡ್ಲಿ ಹಾಕಿ ಸಾಂಬಾರು ಬಡಿಸಿದಳು. ಮುಗಿಸಿ, ಇನ್ನು ಸಾಕು ಅನ್ನುವಂತೆ ಸನ್ನೆ ಮಾಡಿ ಕಾಫಿ ಕುಡಿದು ಎದ್ದ.

ಬ್ರೀಫ್‌ಕೇಸಿನಲ್ಲಿ ಇವತ್ತು ಬೇಕಾದ ಎಲ್ಲ ಕಾಗದಪತ್ರಗಳಿವೆ ಅಂತ ಒಮ್ಮೆ ದೃಢಪಡಿಸಿಕೊಂಡವ ಸರಿ ಅನ್ನುವಂತೆ ಕುರ್ಚಿಯಲ್ಲಿದ್ದ ಹೆಂಡತಿಯತ್ತ ಮುಗುಳ್ನಕ್ಕು ಬಾಗಿಲತ್ತ ತಿರುಗಿದ. 'ಈ ಸಾರಿಯ ಬೋನಸ್ಸು ನಿರ್ಧಾರ ಏನು ಮಾಡಿದಿರಿ?' ಪ್ರಶ್ನೆ ಬಂತು. ಕಾಲು ತಡೆಯಿತು. ಈಗ ಅರ್ಧತಾಸು ಮೊದಲು ಆಸ್ಪತ್ರೆಯ ಪ್ರಸ್ತಾಪ ಅವಳು ಮಾಡಿರದಿದ್ದರೆ, 'ನೋಡು ಈಗ ನಿಂಗೆ ವಿಶ್ರಾಂತಿ ಬೇಕು, ಆಫೀಸಿನ ಸಮಸ್ಯೆ ತಲೆಗೆ ಹಚ್ಚಿಕೋಬೇಡ. ನೋಡಿಕೊಳ್ಳೋಕೆ ಜನ ಇದಾರೆ' ಅಂತ ಹೇಳುತ್ತಿದ್ದ. ಅಥವಾ ಸಮಾಧಾನಕ್ಕೆ ಅವಳೊಂದಿಗೆ ಕುಳಿತು ಸ್ವಲ್ಪಹೊತ್ತು ಚರ್ಚಿಸುತ್ತಿದ್ದನೇನೋ. ಈಗಿನ ಮನಃಸ್ಥಿತಿಯಲ್ಲಿ ಅವೆರಡೂ ಆಗದೆ 'ಇನ್ನೂ ನಿರ್ಧಾರ ಆಗಿಲ್ಲ. ಸಂಜೆ ಮಾತಾಡೋಣ, ಆಗದಾ' ಅಂದ.

ಹೊಸ ಉದ್ಯಮ ಸುರುಮಾಡಿದ ಮೇಲೆ ಶಹರಕ್ಕೂ ಫ್ಯಾಕ್ಟರಿಗೂ ಹತ್ತಿರ ಅಂತ ಇಲ್ಲಿ ಮನೆ ಮಾಡಿದ್ದರು. ಆದರೆ, ಶಹರದ ಹಿಗ್ಗುವ ರಭಸಕ್ಕೆ ಯಲಹಂಕದ ಅಂಚು ಅಂತಿದ್ದದ್ದು ಈಗ ಮೂರು ಕಿಲೋಮೀಟರು ಶಹರದ ಹೊಟ್ಟೆಗೆ ಸರಿದಿತ್ತು. ಮನೆ, ಅಪಾರ್ಟ್‌ಮೆಂಟು ಅಂತ ಚಿಕ್ಕಬಳ್ಳಾಪುರ ರಸ್ತೆಯಲ್ಲೂ ವಾಹನ ಸಂಚಾರ ಏರಿತ್ತು. ಕಾರನ್ನು ಫ್ಯಾಕ್ಟರಿಯ ಪಕ್ಕ ಶೆಡ್ಡಿನಲ್ಲಿ ನಿಲ್ಲಿಸಿದ. ರಸ್ತೆಯಾಚೆಯ ಸೈಟಿನಲ್ಲಿ ಬುಲ್ಡೋಜರೊಂದು ಧೂಳೆಬ್ಬಿಸುತ್ತಿತ್ತು. ಫ್ಯಾಕ್ಟರಿಯ ಸುತ್ತಮುತ್ತ ನಿರ್ಮಾಣದ ಚಟುವಟಿಕೆ ಜೋರಾಗುತ್ತಿರುವುದು ಮೊದಲ ಬಾರಿ ಅನ್ನುವಂತೆ ಗಮನಕ್ಕೆ ಬಂತು. ಸಣ್ಣ ಅಸಹನೆಯೊಂದು ಹಣೆಯಮೇಲೆ ನಿರಿಗೆ ಮೂಡಿಸಿತು.

ಅತ್ತಿಬೆಲೆಯಲ್ಲಿ ಆ ಸಮಯಕ್ಕೆ ಪರಮಶಿವಯ್ಯನವರ 'ಶಿವ ಪ್ಲಾಸ್ಟಿಕ್ಸ್' ಒಂಟಿ ಕಟ್ಟಡ. ಸುತ್ತಮುತ್ತ ಖಾಲಿ ಜಾಗದಲ್ಲಿ ಕುರುಚಲು ಗಿಡಗಳು. ವಾಚಮನ್‌ಗೆ ಒಂದು ಸಣ್ಣ ಶೆಡ್ಡು ಪಕ್ಕದಲ್ಲಿತ್ತು. ಹತ್ತಿರದಲ್ಲೆ ಸುತ್ತುವರಿದ ತಮಿಳುನಾಡಿನ ಗಡಿ. ರಸ್ತೆ ಗಡಿ ದಾಟುವಲ್ಲಿ ಒಂದು ಪೊಲೀಸ್ ಚೆಕ್‌ಪೋಸ್ಟು. ಕೆಮಿಸ್ಟ್ರಿಯಲ್ಲಿ ಪದವಿ ಪಡೆದ ಹೊಸತು, ಕೆಲಸದ ಬೇಟೆಯಲ್ಲಿದ್ದ ತಾನು ಹುಬ್ಬಳ್ಳಿ, ಶಿವಮೊಗ್ಗ ಅಂತ ಅಲೆಮಾರಿಯಾಗಿ ಬೆಂಗಳೂರಿಗೆ ಬಂದು ಅಗ್ಗ ಅಂತ ಮಾರ್ಕೆಟ್ಟಿನಲ್ಲಿದ್ದ ಆ ಉಡುಪಿ ಲಾಜ್‌ನಲ್ಲಿ ಉಳಿದಿದ್ದ. ಅದೇ ಲಾಜಿಗೆ ಗಿರಾಕಿಯೊಬ್ಬನ ಭೇಟಿಗೆ ಬಂದಿದ್ದ ಪರಮಶಿವಯ್ಯನವರಿಗೆ ತನ್ನನ್ನು ಪರಿಚಯಿಸಿದ್ದು ಹೋಟೆಲಿನ ಮ್ಯಾನೇಜರ್.

ಯೋಗಾಯೋಗದ ಸರಪಳಿಯ ಮೊದಲ ಕೊಂಡಿ ಕಾಲಿಗೆ ಸುತ್ತಿಕೊಂಡಿದ್ದು ಅಲ್ಲಿ. ಅತ್ತಿಬೆಲೆ ತಲುಪಿ ತೀರ ಊರ ಹೊರಗಿನ ಕಗ್ಗಾಡು ಅನಿಸಿಬಿಟ್ಟ ಆ ಕ್ಷಣದಲ್ಲಿ ಕಾಡಿದ್ದು ಊಟ ತಿಂಡಿ ಉಳಿದುಕೊಳ್ಳುವ ಚಿಂತೆ. ಆದರೆ, ವರವೊಂದರಂತೆ ಪ್ರಾಪ್ತವಾದ ಉದ್ಯೋಗ ಅದು! ಚೆನ್ನಪ್ಪ ಅನ್ನುವವ ಹಣಕಾಸು ಅಲ್ಲದೆ ಲೆಕ್ಕಪತ್ರದ ಕೆಲಸ ನೋಡಿಕೊಳ್ಳುತ್ತಿದ್ದ. ಹತ್ತು ಜನ ಕೆಲಸಗಾರರಿದ್ದರು. ಅವರ ಮೇಲೆ ಫೋರ್ಮನ್ ಆಗಿದ್ದ ವಡಿವೇಲು ತೀರ ಮುದುಕನಾಗಿದ್ದಕ್ಕೆ ಅವನಿಗೆ ನಿವೃತ್ತಿ ಕೊಟ್ಟು ತನ್ನನ್ನು ನೇಮಿಸಿಕೊಂಡಿದ್ದರು. ವಿದ್ಯಾರ್ಹತೆಯಿದ್ದ ಫೋರ್ಮನ್ ಅರ್ಥಾತ್ ನಿಜದಲ್ಲಿ ಮೇಸ್ತ್ರಿ ತಾನು. ಕೆಲಸಗಾರರಲ್ಲಿ ಕೆಲವರು ಗಡಿಯಾಚೆ ಹಳ್ಳಿಯಿಂದ ಬರುತ್ತಿದ್ದರು. ಕೆಲವರು ಈಕಡೆ ಅಲ್ಲಲ್ಲಿ ಶೆಡ್ಡು ಹಾಕಿಕೊಂಡಿದ್ದರು. ಮಧ್ಯಾಹ್ನ ಕೆಮಿಕಲ್ ತುಂಬಿದ ಬ್ಯಾರೆಲ್ ನೋಡುತ್ತಿದ್ದ. 'ಪಳನಿ ತೋರಿಸ್ತಾನೆ, ಶೆಲ್ವಿ ಹೋಟೆಲಿದೆ ಊಟಮಾಡಿ ಬನ್ನಿ. ಮಧ್ಯಾಹ್ನ ಯಜಮಾನ್ರ ಜತೆ ಮೀಟಿಂಗಿದೆ' ಅಂದಿದ್ದ ಚೆನ್ನಪ್ಪ. ಚೆಕ್‌ಪೋಸ್ಟ್ ಆಚೆ ತಮಿಳುನಾಡು ಕಡೆ ಫರ್ಲಾಂಗು ದೂರದಲ್ಲಿ ಹುಲ್ಲು ಹೊದೆಸಿದ